ಶ್ರೀ ಕೆ.ಎಸ್. ಮಲ್ಲಿಕಾರ್ಜುನ ಪ್ರಸನ್ನ (ಸಣ್ಣ ನೀರಾವರಿ ರಾಜ್ಯ ಸಚಿವರು) :-

ಅ) ಹೌದು.

ಆ) ಬಂದಿದೆ.

ಇ) ಕಾಲುವೆಗಳ ಉಳಿದ ಕೆಲಸಗಳಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಮಂಜೂರಾತಿಗಳನ್ನು ನೀಡಲಾಗಿದ್ದು ಕೆಲಸವನ್ನು ಶೀಘ್ರದಲ್ಲಿಯೇ ಪ್ರಾರಂಭಿಸಲಾಗುವುದು.

ಈ) ಅನುದಾನದ ಲಭ್ಯತೆಯನ್ನವಲಂಬಿಸಿ ಕೆಲಸವನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ಹುಳಿಯಾರು ಮತ್ತು ಹಿರಿಯೂರು ರಸ್ತೆ ದುರಸ್ತಿ

956. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

ಅ) ಹುಳಿಯೂರು ಮತ್ತು ಹಿರಿಯೂರು ರಸ್ತೆಯು ತುಂಬಾ ಹದಗೆಟ್ಟಿದ್ದು ಅದನ್ನು ಸರಿಪಡಿಸಲು ಸರ್ಕಾರವು ಕ್ರಮ ತೆಗೆದುಕೊಳ್ಳದೆ ಇರುವುದು ನಿಜವೆ;

ಆ) ಹಾಗಿದ್ದಲ್ಲಿ ರಸ್ತೆಯನ್ನು ದುರಸ್ತಿ ಗೊಳಿಸಲು ಸರ್ಕಾರ ಕೈಗೊಂಡ ಕ್ರಮವೇನು?

ಶ್ರೀ ಜಿ.ಹೆಚ್. ಅಶ್ವತ್ಥ್ ರೆಡ್ಡಿ (ಲೋಕೋಪಯೋಗಿ ಸಚಿವರು) -

ಅ) ವಾಹನ ಸಂಚಾರಕ್ಕೆ ತೊಂದರೆ ಆಗದಂತೆ ಈ ರಸ್ತೆಯನ್ನು ನಿರ್ವಹಣೆ ಮಾಡಲಾಗಿದೆ.

ಆ) ಲಭ್ಯವಿರುವ ನಿರ್ವಹಣೆ ಅನುದಾನದಲ್ಲಿ ಈ ರಸ್ತೆಯನ್ನು ಆದಷ್ಟು ಮಟ್ಟಿಗೆ ಸುಸ್ಥಿತಿಯಲ್ಲಿಡಲಾಗುತ್ತಿದೆ. ರಸ್ತೆಯಲ್ಲಿದ್ದ ಗುಂಡಿಗಳನ್ನು ಮುಚ್ಚಲಾಗಿದೆ. ರಸ್ತೆಯ ಬದಿಗಳನ್ನು ಶಕ್ತಿಯುತವನ್ನಾಗಿ ಮಾಡಲು ಜಲ್ಲಿ ಸಂಗ್ರಹಣೆ ಕಾರ್ಯ ಪ್ರಗತಿಯಲ್ಲಿದೆ.

ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಅಧಿಕಾರಿಗಳನ್ನು ನೇಮಿಸುವ ಬಗ್ಗೆ

959. ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) :- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ಹಾಗೂ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ -

ಅ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳ ಆಡಳಿತಾಧಿಕಾರಿಗಳ ವಶಕ್ಕೆ ಬಂದಿರುವುದು ಸರ್ಕಾರಕ್ಕೆ ತಿಳಿದಿದೆಯೇ;

ಆ) ಆಡಳಿತಾಧಿಕಾರಿಗಳ ನೇಮಕ ಪಂಚಾಯತಿ ಕಾರ್ಯ ವ್ಯವಸ್ಥೆಗೆ ವಿರುದ್ಧವಲ್ಲವೆ;

ಇ) ಹಾಗಿದ್ದಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತ್‌ಗಳಿಗೆ ಅಧಿಕಾರಿಗಳನ್ನು ನೇಮಕ ಮಾಡಲು ಸರ್ಕಾರವು ಆಲೋಚಿಸಿದೆಯೇ;

ಈ) ಹಾಗಿದ್ದಲ್ಲಿ ಎಂದಿನಿಂದ ನೇಮಕಾತಿ ಮಾಡಲಾಗುವುದು?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಂದಾಯ ಸಚಿವರು) -

ಅ) ಹೌದು.

ಆ) ಕಳೆದ ಐದು ವರ್ಷಗಳಲ್ಲಿ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯತಿಗಳ ಕಾರ್ಯ ನಿರ್ವಹಣೆ ಅವುಗಳ ಸಾಮರ್ಥ್ಯ ಹಾಗೂ ನ್ಯೂನತೆಗಳನ್ನು ಹೊರತಂದಿದೆ. ಹೀಗೆ ಗಮನಿಸಲಾದ ನ್ಯೂನತೆಗಳನ್ನು ಸರಿಪಡಿಸಲು ಮತ್ತು 72ನೇ ಸಂವಿಧಾನ ತಿದ್ದುಪಡಿಯ ವಿಧೇಯಕದ ಬೆಳೆಯಲ್ಲಿ ಸರ್ಕಾರವು ಈಗಿರುವ ಪಂಚಾಯತ್ ರಾಜ್ ಕಾಯಿದೆಗೆ ಒಂದು ಸಮಗ್ರ ತಿದ್ದುಪಡಿಯನ್ನು ತರಲು ಉದ್ದೇಶಿಸಿದೆ. ತಿದ್ದುಪಡಿಯ ಮಸೂದೆಯು ಜಾರಿಗೆ ಬಂದ ನಂತರ ಆದಷ್ಟು ಬೇಗನೆ ಚುನಾವಣೆ ನಡೆಸಲಾಗುವುದು. ಅಲ್ಲಿಯವರೆಗೆ ತಾತ್ಕಾಲಿಕವಾಗಿ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ.

ಇ) ಮತ್ತು (ಈ) ಎಲ್ಲಾ ಜಿಲ್ಲಾ ಪರಿಷತ್ತುಗಳ ಅವಧಿಯು ದಿನಾಂಕ 13.1.1992 ಕ್ಕೆ ಅಂತ್ಯಗೊಂಡಿದ್ದರಿಂದ ಬೀದರ್ ಜಿಲ್ಲಾ ಪರಿಷತ್ತು ಹೊರತುಪಡಿಸಿ ಉಳಿದ ಎಲ್ಲಾ ಜಿಲ್ಲಾ ಪರಿಷತ್‌ಗಳಿಗೆ ದಿನಾಂಕ 14.1.92 ರಿಂದ ಆಡಳಿತಾಧಿಕಾರಿಗಳನ್ನು ನೇಮಿಸಲಾಗಿದೆ. ಬೀದರ್ ಜಿಲ್ಲಾ ಪರಿಷತ್‌ಗೆ ಉಚ್ಚ ನ್ಯಾಯಾಲಯದ ತಡೆಯಾಜ್ಞೆಯಿದೆ. ಮಂಡಲ ಪಂಚಾಯತಿಗಳ ಅವಧಿಯು ಕೊನೆಗೊಳ್ಳುವ ದಿನಾಂಕವನ್ನು ಅನುಬಂಧ-1 ರಲ್ಲಿ ತೋರಿಸಲಾಗಿದೆ. ಅವಧಿ ಮುಗಿಯುತ್ತಿರುವ ಮಂಡಲ ಪಂಚಾಯತಿಗಳಿಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳು ಅವರಿಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಆಡಳಿತಾಧಿಕಾರಿಗಳನ್ನು ನೇಮಿಸುತ್ತಿದ್ದಾರೆ.

ANNEXURE –1

LIST SHOWING THE TENURE OF ELECTED MEMBERS OF MANDAL PANCHAYATS IN THE STATE.

Sl. No.	Name of the District	Date of list published by Deputy Commissioner concerned.	Date of Expiry
1.	Bangalore	9.2.1987	8.2.1992
2.	Kolar	7.2.1987	6.2.1992
3.	Tumkur	6.2.1987	5.2.1992
4.	Chitradurga	9.2.1987	8.2.1992
5.	Shimoga	13.2.1987	12.2.1992
6.	Mysore	12.2.1987	11.2.1992
7.	Mandya	23.2.1987	22.2.1992
8.	Coorg	7.2.1987	6.2.1992
9.	Dakshina Kannada	9.2.1987	8.2.1992
10.	Chickmagalur	9.2.1987	8.2.1992
11.	Hassan	16.2.1987	15.2.1992
12.	Belgaum	23.2.1987	22.2.1992
13.	Dharwad	4.4.1987	3.4.1992
14.	Bijapur	31.3.1987	30.3.1992
15.	Karwar	30.3.1987	29.3.1992
16.	Gulbarga	4.4.1987	3.4.1992
17.	Bidar	7.2.1987	6.2.1992
18.	Raichur	27.1.1987	26.1.1992
19.	Bellary	11.2.1987	10.2.1992

NOTE : The dates of Notification constituting the Mandal Panchayats should however be verified once again.